1956ರ ಕಂಪನಿ ಅಧಿನಿಯಮ 619 (ಎ), (2) ಪ್ರಕರಣದ ಮೇರೆಗೆ.

1. ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಲಿ ನಿಯಮಿತದ 2006–07ನೇ 5ನೇ ವಾರ್ಷಿಕ ವರದಿ.

2. ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ನಿಯಮಿತದ 2006–07ನೇ ಸಾಲಿನ 31ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು)

ಕುಮಾರಿ ಶೋಭಾ ಕರಂದ್ಲಾಜೆ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಅವರ ಪರವಾಗಿ

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262 (3)ನೇ ಮತ್ತು 300 (5)ನೇ ಪ್ರಕರಣದ ಮೇರೆಗೆ.

1. ಬಾಗಲಕೋಟೆ ಜಿಲ್ಲಾ ಪಂಚಾಯತ್‌ನ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಪಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):–

1956 ರ ಕಂಪನಿ ಅಧಿನಿಯಮದ ಅನುಚ್ಛೇದ 619 (ಎ) ಮೇರೆಗೆ.

ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ, ಬೆಂಗಳೂರು, ಇದರ 2006–07ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

6. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಳಿಗೆ ಇಬ್ಬರು ಸದಸ್ಯರನ್ನು ಚುನಾಯಿಸುವ ಬಗ್ಗೆ.

ಅಧ್ಯಕ್ಷರು:– ಮಾನ್ಯ ರಾಮಚಂದ್ರಗೌಡರೆ, ಪ್ರಸ್ತಾವವನ್ನು ಮಂಡಿಸಿ.

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು):– ದಿನಾಂಕ 23ನೇ ಜುಲೈ 2008 ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪಕ ಮಂಡಳಿಗೆ ಇಬ್ಬರು ಸದಸ್ಯರನ್ನು ಹಾಗೂ ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಒಬ್ಬ ಸದಸ್ಯರನ್ನು ಚುನಾಯಿಸಲು ಚುನಾವಣ ಪ್ರಸ್ತಾಪವನ್ನು ಮಂಡಿಸಿದ್ದು, ಮೇಲ್ಕಂಡ ಸದಸ್ಯರುಗಳನ್ನು ನೇಮಿಸಲು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ಈ ಸದನವು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಮಾನ್ಯ ಸಚಿವರು ಮಂಡಿಸಿದ ಪ್ರಸ್ತಾವನೆಗೆ ಸದನದ ಸಹಮತಿ ಇದೆ ಎಂದು ಭಾವಿಸುತ್ತೇನೆ.

ಈಗ ಮಾನ್ಯ ಸಚಿವರಾಗಿರುವ ಮಾನ್ಯ ಬಸವರಾಜು ಬೊಮ್ಮಾಯಿರವರು ಮತ್ತು ಮಾನ್ಯ ಮುರುಗೇಶ್ ನಿರಾಣಿಯವರು ಮಾನ್ಯ ಸದಸ್ಯರುಗಳ ಗೌರವಾರ್ಥ ಈ ದಿನ ಮಧ್ಯಾಹ್ನ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ಭೋಜನ ಕೂಟವನ್ನು ಏರ್ಪಡಿಸಿರುತ್ತಾರೆ. ದಯವಿಟ್ಟು ತಾವೆಲ್ಲಾ ಅದರಲ್ಲಿ ಭಾಗವಹಿಸಬೇಕೆಂದು ಕೋರುತ್ತೇನೆ. ಈಗ ಸದನವನ್ನು ಮಧ್ಯಾಹ್ನ 3.15 ಗಂಟೆಗೆ ಮುಂದೂಡಲಾಗಿದೆ.

(ಸದನವು 2 ಗಂಟೆ 15 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

7. ನಿಲುವಳಿ ಸೂಚನೆ– ಅನುಮತಿ ಕೋರಿ ಚರ್ಚೆ.

ವಿಷಯ: ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ.

ಡಿ.ಕೆ. ಶಿವಕುಮಾರ್ (ಕನಕಪುರ): ಮಾನ್ಯ ಅಧ್ಯಕ್ಷರೆ, ನಾನು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಪ್ರಸ್ತಾವನೆ ಮಾಡಲಿಲ್ಲ ಎಂದರೆ ನನ್ನ ಆತ್ಮಸಾಕ್ಷಿಗೆ ಮೋಸ ಮಾಡಿದಂಥೇ ಆಗುತ್ತದೆ. ಈ ಎಲ್ಲಾ ಅನಾಹುತಕ್ಕೆ ನಾವೇ ಕಾರಣಕರ್ತರಾಗಿರಬಹುದು, ನಮ್ಮ ಸರ್ಕಾರವೇ ಎಡವಿರಬಹುದು, ಆದರೆ ರಾಜ್ಯ ಮುಂದೆ ಎಡವಬಾರದು. ಈ ರಾಜ್ಯಕ್ಕೆ ಆಗುತ್ತಿರುವ ನಷ್ಟವನ್ನು ತಪ್ಪಿಸಬೇಕು ಎನ್ನತಕ್ಕ ದೃಷ್ಟಿಯಿಂದ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಸಂಸ್ಕೃತದಲ್ಲಿ ಒಂದು ಮಾತು ಇದೆ. "ನರಾಭೋಗಂ ಶೀಲಾ ಭೋಗಂ ಎಂದು" ಅಂದರೆ ಮನುಷ್ಯನಿಗೆ ಮತ್ತು ಶಿಲೆಗೆ ಒಂದೊಂದು ಕಾಲದಲ್ಲಿ ಒಂದೊಂದು ಯೋಗ, ಬಲ ಕೂಡಿಬರುತ್ತದಂತೆ. ಸಾವಿರಾರು ದೇವಾಲಯಗಳು ಇದೆ. ತಿರುಪತಿ ವೆಂಕಟೇಶ್ವರಸ್ವಾಮಿ ದೇವಾಲಯವನ್ನು ನಾವೆಲ್ಲಾ ನೋಡಿದ್ದೇವೆ.

ಶ್ರೀ ಆರ್. ಅಶೋಕ್: ನಿಮಗೆ ಯಾವಾಗ ನಮ್ಮ ಕಡೆಯ ವಿಚಾರ ಬಂತು?

ಶ್ರೀ ದಿನೇಶ್ ಗುಂಡುರಾವ್: ಮಾನ್ಯ ಶಿವಕುಮಾರ್‌ರವರಲ್ಲಿ ಇರತಕ್ಕ ಪಾಂಡಿತ್ಯ ನಿಮ್ಮಲ್ಲಿ ಯಾರಿಗೂ ಇಲ್ಲ ಎಂದು ಹೇಳುತ್ತಿದ್ದೆನೆ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು: ನೀವು ಕೂಡ ಬ್ರಾಹ್ಮಣೋತ್ತಮರು. ನಿಮಗೂ ಅದು ಇಲ್ಲ.